| ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 589 (674) |
| ಸದಸ್ಯರ ಹೆಸರು: | ಶ್ರೀ ಐವನ್ ಡಿ' ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 18.08.2025 |
| ಉತ್ತರಿಸುವವರು: | ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ.ಸಂ. | ವಿಷಯ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅರಣ್ಯ ಇಲಾಖೆಯಿಂದ ನೀಡಿದ ಭೂಮಿ ಎಷ್ಟು: (ಜಿಲ್ಲಾವರು ವಿವರ ನೀಡುವುದು) ಯಾವ ಯೋಜನೆಗಳಿಗೆ ಅರಣ್ಯ ಭೂಮಿ ನೀಡಲಾಗಿದೆ; ಯಾವ ಮಾನದಂಡದಲ್ಲಿ ನೀಡಲಾಗಿದೆ: (ವಿವರ ನೀಡುವುದು) | **ಅರಣ್ಯ ಸಂರಕ್ಷಣೆ ಘಟಕಕ್ಕೆ ಸಂಬಂಧಿಸಿದಂತೆ:**<br>• ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅರಣ್ಯ ಇಲಾಖೆಯಿಂದ ಒಟ್ಟು 32,896.2624 ಹೆಕ್ಟೇರ್ ಅರಣ್ಯ ಪ್ರದೇಶವನ್ನು ನೀಡಲಾಗಿದೆ.<br>• ಅರಣ್ಯ ವಿಭಾಗವಾರು ಬಿಡುಗಡೆಯಾದ ಅರಣ್ಯ ಪ್ರದೇಶದ ವಿವರವನ್ನು **ಅನುಬಂಧದಲ್ಲಿ** ಒದಗಿಸಿದೆ.<br>• 1) ನೀರಾವರಿ ಯೋಜನೆಗೆ 2) ಪವನ / ಜಲ ವಿದ್ಯುತ್ ಯೋಜನೆಗೆ 3) ಗಣಿಗಾರಿಕೆಗೆ 4) ರಸ್ತೆ ನಿರ್ಮಾಣಕ್ಕೆ 5) ರೈಲ್ವೆ ಕಾಮಗಾರಿಗೆ 6) ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣಕ್ಕೆ 7) ಇತರೆ ಯೋಜನೆ (ಶಾಲಾ ಕಟ್ಟಡ, ಆಸ್ಪತ್ರೆ ಕಟ್ಟಡ, ರಕ್ಷಣ ಇಲಾಖೆ, ದೂರ ಸಂಪರ್ಕ ಪ್ರಸರಣ ಮಾರ್ಗ ಇತ್ಯಾದಿ) ಗಳಿಗೆ ಗುತ್ತಿಗೆ ಆಧಾರದ ಮೇಲೆ ಅರಣ್ಯ ಭೂಮಿಯನ್ನು ನೀಡಲಾಗಿರುತ್ತದೆ.<br>• ಅರಣ್ಯ ಸಂರಕ್ಷಣಾ ಕಾಯ್ದೆ [VAN (SANRAKSHAN EVAM AND SAMVARDHAN) ADHINIYAM] 1980ರ ಮಾನದಂಡದನ್ವಯದಲ್ಲಿ ನೀಡಲಾಗಿದೆ.<br><br>**ವನ್ಯಜೀವಿ ಘಟಕಕ್ಕೆ ಸಂಬಂಧಿಸಿದಂತೆ:**<br>ಸಂರಕ್ಷಿತ ಪ್ರದೇಶಗಳಲ್ಲಿ ಕುಡಿಯುವ ನೀರಿನ ಯೋಜನೆ, ವಿದ್ಯುತ್ ಸಂಪರ್ಕ, ಇಂಟರ್ನೆಟ್ ಸೌಲಭ್ಯ ಹಾಗೂ ಇನ್ನಿತರೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಉಪಯೋಗಿ ಸಂಸ್ಥೆಯವರು ವನ್ಯಜೀವಿ ವಿಮೋಚನೆಗಾಗಿ ಪ್ರಸ್ತಾವನೆಗಳನ್ನು ಸಲ್ಲಿಸಿದ್ದಲ್ಲಿ, ವನ್ ಸಂರಕ್ಷಣ್ ಏವಂ ಸಂವರ್ಧನ್ ಅಧಿನಿಯಮ್, 1980 ಹಾಗೂ ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ರ ನಿಯಮಗಳಿಗೊಳಪಟ್ಟು ಸದರಿ ಪ್ರಸ್ತಾಪಿತ ಅರಣ್ಯ ಪ್ರದೇಶಗಳನ್ನು ಉಪಯೋಗಿಸಲು ಮಾತ್ರವೇ ಅನುಮೋದನೆ ನೀಡಲಾಗುತ್ತದೆ.<br><br>ಮೇಲ್ಕಂಡ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ವಿವಿಧ ವಿಭಾಗಗಳಿಂದ ಕಳೆದ 03 ವರ್ಷಗಳಲ್ಲಿ ಸ್ವೀಕೃತಗೊಂಡಿರುವ ವನ್ಯಜೀವಿ ವಿಮೋಚನೆ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಒಟ್ಟಾರೆ 3.03952 ಹೆ. ಸಂರಕ್ಷಿತ ಅರಣ್ಯ ಪ್ರದೇಶವನ್ನು ಉಪಯೋಗಿಸಲು ಅನುಮೋದನೆ ನೀಡಲಾಗಿರುತ್ತದೆ. ವಿವರ ಈ ಕೆಳಕಂಡಂತಿದೆ. |

| ಕ್ರ. ಸಂ | ವಿಭಾಗ | ಅರಣ್ಯ ಪ್ರದೇಶ (ಹೆ.) |
|---|---|---|
| 1 | ಕಾಳಿ ಹುಲಿ ಸಂರಕ್ಷಿತ ಪ್ರದೇಶ | 0.14000 |
| 2 | ಕಾವೇರಿ ವನ್ಯಜೀವಿ ವಿಭಾಗ | 0.03810 |
| 3 | ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ | 0.17342 |
| 4 | ಬೆಳಗಾವಿ (ಪ್ರಾ.) ವಿಭಾಗ | 0.02000 |
| 5 | ವಿಜಯನಗರ (ಪ್ರಾ.) ವಿಭಾಗ | 2.66800 |
| | **ಒಟ್ಟು** | **3.03952** |

| ಕ್ರ.ಸಂ. | ವಿಷಯ | ಉತ್ತರ |
|---|---|---|
| ಆ) | ಇತ್ತೀಚಿನ ದಿನಗಳಲ್ಲಿ ಆನೆ ಮತ್ತಿತರ ಪ್ರಾಣಿಗಳ ದಾಳಿಯಿಂದ ಮೃತಪಟ್ಟ ಜನರ ಸಂಖ್ಯೆ ಎಷ್ಟು: ಅವರಿಗೆ ನೀಡಿದ ಪರಿಹಾರ ಎಷ್ಟು; ಕೃಷಿ ಮತ್ತು ಮನುಷ್ಯರಿಗೆ ಉಂಟಾದ ನಷ್ಟಕ್ಕೆ ನೀಡಿದ ಪರಿಹಾರ | 2025-26ನೇ ಸಾಲಿನಲ್ಲಿ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳಿಂದ ಉಂಟಾದ ಹಾನಿ ಪ್ರಕರಣಗಳಿಗೆ ಪಾವತಿಸಲಾದ ಪರಿಹಾರ ಧನದ ವಿವರ ಈ ಕೆಳಕಂಡಂತಿದೆ. |

<table>
<tr><th>ಕ್ರ.ಸಂ.</th><th>ವಿಷಯ</th><th>ಉತ್ತರ</th></tr>
<tr><td></td><td>ಎಷ್ಟು(ವಿವರ ನೀಡುವುದು)</td><td>
<table>
<tr><th>ವಿವರಣೆ</th><th>ಪ್ರಕರಣ ಸಂಖ್ಯೆ</th><th>ಪರಿಹಾರ ಧನ (ರೂ.ಲಕ್ಷಗಳಲ್ಲಿ)</th></tr>
<tr><td>ಮಾನವ-ಪ್ರಾಣಹಾನಿ</td><td>21</td><td>315.00</td></tr>
<tr><td>ಬೆಳೆನಾಶ</td><td>6532</td><td>658.70</td></tr>
<tr><td>ಸಾಕುಪ್ರಾಣಿ ಹತ್ಯೆ</td><td>1091</td><td>114.83</td></tr>
<tr><td>ಮಾನವ-ಗಾಯ</td><td>41</td><td>24.13</td></tr>
<tr><td>ಆಸ್ತಿನಷ್ಟ</td><td>431</td><td>21.37</td></tr>
</table>
</td></tr>
<tr><td>ಇ)</td><td>ಅರಣ್ಯ ಪ್ರದೇಶದ ಸ್ಥಳವನ್ನು ಅಭಿವೃದ್ಧಿ ಕಾರ್ಯಕ್ಕಾಗಿ ನೀಡಿದಾಗ, ಇಲಾಖೆ ವಿಧಿಸಿರುವ ಷರತ್ತುಗಳೇನು; ಇದರಿಂದ ಇಲಾಖೆಗೆ ಉಂಟಾಗುವ ನಷ್ಟವೇನು: (ವಿವರ ನೀಡುವುದು).</td><td>ಅರಣ್ಯ ಸಂರಕ್ಷಣೆ ಘಟಕಕ್ಕೆ ಸಂಬಂಧಿಸಿದಂತೆ:<br>ಅರಣ್ಯ ಪ್ರದೇಶದ ಸ್ಥಳವನ್ನು ಅಭಿವೃದ್ಧಿ ಕಾರ್ಯಕ್ಕಾಗಿ ನೀಡಿದಾಗ, ಇಲಾಖೆ ವಿಧಿಸಿರುವ ಷರತ್ತುಗಳು ಈ ಕೆಳಕಂಡತಿದೆ.<br>• ತೀರುವಳಿ ಮಾಡಿದ ಅರಣ್ಯ ಭೂಮಿಯನ್ನು ಯಥಾ ಸ್ಥಿತಿಯಲ್ಲಿಡುವುದು.<br>• ತೀರುವಳಿ ಮಾಡಿದ ಅರಣ್ಯ ಭೂಮಿಯನ್ನು ಮರು ಗುತ್ತಿಗೆ ನೀಡಬಾರದು.<br>• ಉಪಯೋಗಿ ಸಂಸ್ಥೆಯವರಿಂದ ಅರಣ್ಯ ಭೂಮಿಯ ನಿವ್ವಳ ಪ್ರಸ್ತುತ ಮೌಲ್ಯವನ್ನು (NPV) ರಾಜ್ಯ ಸರ್ಕಾರವು ಪಡೆಯಬೇಕು. [ಸಚಿವಾಲಯವು ಹೊರಡಿಸಿದ ಕ್ರೋಢೀಕೃತ ಮಾರ್ಗಸೂಚಿಗಳು ಮತ್ತು ಸ್ಪಷ್ಟೀಕರಣದ ಅಧ್ಯಾಯ-3 ರಲ್ಲಿ ನೀಡಲಾದ ಮಾರ್ಗಸೂಚಿಗಳ ಪ್ರಕಾರ, ಗೌರವಾನ್ವಿತ ಭಾರತದ ಸುಪ್ರೀಂ ಕೋರ್ಟ್ ದಿನಾಂಕ: 28.03.2008, 24.04.2008 ಮತ್ತು 09.05.2008 ರಂದು T. N. ಗೋದವರ್ಮನ್ ತಿರುಮಲಪಾಡ್ vs. ಭಾರತ ಒಕ್ಕೂಟ ಪ್ರಕರಣದಲ್ಲಿ ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 202/1995 ರಲ್ಲಿ ನೀಡಿದ ಆದೇಶದ ಪ್ರಕಾರ].<br>• ಒಂದು ಹೆಕ್ಟೇರ್ ಗಿಂತ ಕಡಿಮೆ ವಿಸ್ತೀರ್ಣವುಳ್ಳ ಯೋಜನೆಗಳಿಗೆ ಒಂದು ಗಿಡ/ಮರದ ಪರ್ಯಾಯವಾಗಿ 10 ಸಸಿಗಳನ್ನು ನೆಟ್ಟು ಪೋಷಿಸುವ ಅಥವಾ ಕನಿಷ್ಠ 100 ಗಿಡಗಳನ್ನು ನೆಟ್ಟು ಪೋಷಿಸುವ ವೆಚ್ಚ ಪಾವತಿ ಷರತ್ತು (1:10 time Compensatory Plantation OR Minimum 100 tree plantation Cost).<br>• ಒಂದು ಹೆಕ್ಟೇರ್ ಹಾಗೂ ಮೇಲ್ಪಟ್ಟ ಪ್ರಸ್ತಾವನೆಗಳಲ್ಲಿ ಉಪಯೋಗಿ ಸಂಸ್ಥೆಯವರು ಉದ್ದೇಶಿತ ಅರಣ್ಯ ಪ್ರದೇಶಕ್ಕೆ ಸಮನಾದ ಮತ್ತು ಅರಣ್ಯಕ್ಕೆ ಹೊಂದಿಕೊಂಡಿರುವ ಯೋಗ್ಯ ಅರಣ್ಯೇತರ ಅಥವಾ ಖಾಸಗಿ ಜಮೀನನ್ನು [Compensatory Afforestation Land i.e., Revenue Land / Patta Land] ಅರಣ್ಯ ಇಲಾಖೆಗೆ ಶಾಶ್ವತವಾಗಿ ನೀಡಬೇಕು.<br>• ಉಪಯೋಗಿ ಸಂಸ್ಥೆಯವರು ಅರಣ್ಯ ಇಲಾಖೆಗೆ ನೀಡಿದ ಅರಣ್ಯೇತರ ಅಥವಾ ಖಾಸಗಿ ಜಮೀನಿನಲ್ಲಿ ಅರಣ್ಯೀಕರಣಕ್ಕಾಗಿ ಪರಿಹಾರಾತ್ಮಕ ನೆಡುತೋಪು (Compensatory Afforestation Charges) ವೆಚ್ಚದ ಪಾವತಿ ಮಾಡಬೇಕು.<br>• ಭಾರತದ ಗೌರವಾನ್ವಿತ ಸುಪ್ರೀಂ ಕೋರ್ಟ್‌ನ ಅಂತಿಮ ತೀರ್ಪಿನ ಪ್ರಕಾರ, ಬಳಕೆದಾರ ಏಜೆನ್ಸಿಯು ಹೆಚ್ಚುವರಿ NPV ಮೊತ್ತವನ್ನು ಪಾವತಿಸಲು ಒಪ್ಪಿಗೆ ಪತ್ರವನ್ನು ನೀಡಬೇಕು.<br>• ಅರಣ್ಯ ಭೂಮಿಯನ್ನು ತೀರುವಳಿ ಬದಲಿಗೆ ಉಪಯೋಗಿ ಸಂಸ್ಥೆಯವರು ಪಾವತಿ ಮಾಡಬೇಕಾದ ಪರಿಹಾರ ಶುಲ್ಕಗಳನ್ನು, PARIVESH ನ ಇ-ಪಾವತಿ ಮಾಡ್ಯೂಲ್ (https://parivesh.nic.in) ಮೂಲಕ, ರಾಷ್ಟ್ರೀಯ ಪ್ರಾಧಿಕಾರ (CAMPA) ನಿರ್ವಹಿಸುವ ರಾಜ್ಯ/UT CAMPA ಯ ಸಂಬಂಧಿತ ಖಾತೆಗೆ ವರ್ಗಾಯಿಸಬೇಕು/ ಠೇವಣಿ ಇಡಬೇಕು.<br>• ಅರಣ್ಯ ಭೂಮಿಯನ್ನು ತೀರುವಳಿ ಬದಲಿಗೆ ಉಪಯೋಗಿ ಸಂಸ್ಥೆಯವರು ನೀಡಿದ ಅರಣ್ಯೇತರ ಪ್ರದೇಶವನ್ನು ರಕ್ಷಿತ / ಕಾಯ್ದಿಟ್ಟ ಅರಣ್ಯವೆಂದು ಅಧಿಸೂಚನೆಯಾಗಿ ಘೋಷಿಸಬೇಕು. (RF/PF Notifications).<br>• ಅರಣ್ಯ ಭೂಮಿಯಲ್ಲಿ ಯಾವುದೇ ಕಾರ್ಮಿಕ ಶಿಬಿರವನ್ನು ಸ್ಥಾಪಿಸಬಾರದು.<br>• ಅಗತ್ಯವಿದ್ದ ಸಂದರ್ಭದಲ್ಲಿ, ಉಪಯೋಗಿ ಸಂಸ್ಥೆಯವರು</td></tr>
</table>

| ಕ್ರ.ಸಂ. | ವಿಷಯ | ಉತ್ತರ |
|---|---|---|
| | | ಪರಿಸರ (ಸಂರಕ್ಷಣಾ) ಕಾಯ್ದೆ 1986 ರ ಅಡಿಯಲ್ಲಿ ಹೊರಡಿಸಲಾದ ಪರಿಸರ ಪರಿಣಾಮ ಮೌಲ್ಯಮಾಪನ ಅಧಿಸೂಚನೆ, 2006 ರ ಅಡಿಯಲ್ಲಿ ಪರಿಸರ ಅನುಮತಿಯನ್ನು ಪಡೆಯಬೇಕು.<br>• ಉಪಯೋಗಿ ಸಂಸ್ಥೆಯವರು ತೀರುವಳಿ ಮಾಡಿದ ಅರಣ್ಯ ಭೂಮಿಯ ಹತ್ತಿರದ ಅರಣ್ಯ ಪ್ರದೇಶಗಳ ಮೇಲೆ ಯಾವುದೇ ಹಾನಿ ಮತ್ತು ಒತ್ತಡವನ್ನು ತಪ್ಪಿಸಲು ಕಾರ್ಮಿಕರು ಮತ್ತು ಸ್ಥಳದಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಉರುವಲು, ಆದ್ಯತೆಯ ಪರ್ಯಾಯ ಇಂಧನಗಳನ್ನು ಒದಗಿಸಬೇಕು.<br>• ಮಾರ್ಗಪಲ್ಲಟವಾದ ಅರಣ್ಯ ಭೂಮಿಯ ಗಡಿಯನ್ನು ಯೋಜನೆಯ ವೆಚ್ಚದಲ್ಲಿ ನಾಲ್ಕು ಅಡಿ ಎತ್ತರದ ಬಲವರ್ಧಿತ ಸಿಮೆಂಟ್ ಕಾಂಕ್ರೀಟ್ ಕಂಬಗಳನ್ನು ನಿರ್ಮಿಸುವ ಮೂಲಕ ನೆಲದ ಮೇಲೆ ಗುರುತಿಸಬೇಕು, ಪ್ರತಿಯೊಂದಕ್ಕೂ ಅದರ ಸರಣಿ ಸಂಖ್ಯೆ, ಮುಂದಕ್ಕೆ ಮತ್ತು ಹಿಂದಕ್ಕೆ ಬೇರಿಂಗ್ ಮತ್ತು ಕಂಬದಿಂದ ಕಂಬದವರೆಗಿನ ಅಂತರವನ್ನು ಸೂಚಿಸಬೇಕು.<br>• ಪ್ರಸ್ತಾವನೆಯಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶವನ್ನು ಹೊರತುಪಡಿಸಿ ಬೇರೆ ಯಾವುದೇ ಉದ್ದೇಶಕ್ಕಾಗಿ ಅರಣ್ಯ ಭೂಮಿಯನ್ನು ಬಳಸಬಾರದು.<br>• ಈ ಯೋಜನೆಯಿಂದಾಗಿ, ಆ ಪ್ರದೇಶದಲ್ಲಿ ಲಭ್ಯವಿರುವ ವನ್ಯಜೀವಿಗಳಿಗೆ ಯಾವುದೇ ಹಾನಿಯಾಗದಂತೆ ಉಪಯೋಗಿ ಸಂಸ್ಥೆಯವರು ಖಚಿತಪಡಿಸಿಕೊಳ್ಳಬೇಕು.<br>• ಕಡಿಯಲು ಗುರುತಿಸಲಾದ ಗರಿಷ್ಠ ಸಂಖ್ಯೆಯ ಮರಗಳ ಸ್ಥಳಾಂತರದ ಸಾಧ್ಯತೆಯನ್ನು ಉಪಯೋಗಿ ಸಂಸ್ಥೆಯವರು ಅನ್ವೇಷಿಸಬೇಕು ಮತ್ತು ಯಾವುದೇ ಮರ ಕಡಿಯುವಿಕೆಯನ್ನು ಅನಿವಾರ್ಯವಾದಾಗ ಮಾತ್ರ ಕಡಿಯಬೇಕು ಮತ್ತು ಅದು ಕೂಡ ರಾಜ್ಯ ಅರಣ್ಯ ಇಲಾಖೆಯ ಕಟ್ಟುನಿಟ್ಟಿನ ಮೇಲ್ವಿಚಾರಣೆಯಲ್ಲಿ ಮಾಡಬೇಕು.<br>• ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಇಲ್ಲದೆ ಪ್ರಸ್ತಾವನೆಯ ವಿನ್ಯಾಸ ಯೋಜನೆಯನ್ನು ಬದಲಾಯಿಸಬಾರದು.<br>• ಉಪಯೋಗಿ ಸಂಸ್ಥೆಯವರು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಅರಣ್ಯ ತೀರುವಳಿ ಪ್ರದೇಶ, ಪಕ್ಕದಲ್ಲಿರುವ ಅರಣ್ಯ ಪ್ರದೇಶ ಮತ್ತು ಮಾನವ ವಸಾಹತುಗಳಲ್ಲಿ ಪಕ್ಷಿಗಳಿಗೆ ಪರ್ಯಾಯ ಆವಾಸಸ್ಥಾನ/ಮನೆಯನ್ನು ರಚಿಸಬೇಕು [ಪರಿಸರ ಸ್ನೇಹಿ ವಸ್ತುಗಳಿಂದ ಕೃತಕವಾಗಿ ಮಾಡಿದ ಪಕ್ಷಿ ಗೂಡುಗಳನ್ನು] ಮತ್ತು ನಿರ್ವಹಿಸಬೇಕು.<br>• ಯೋಜನಾ ಕಾರ್ಯ ಮತ್ತು ಅನುಷ್ಠಾನವನ್ನು ಪ್ರಾರಂಭಿಸುವ ಮೊದಲು, ಉಪಯೋಗಿ ಸಂಸ್ಥೆಯವರು ಅನ್ವಯಿಸಿದರೆ, ರಾಜ್ಯ ಸರ್ಕಾರದ ಆರ್ & ಆರ್ ನೀತಿಯ ಪ್ರಕಾರ, ಭಾರತ ಸರ್ಕಾರದ ರಾಷ್ಟ್ರೀಯ ಆರ್ & ಆರ್ ನೀತಿಗೆ ಅನುಗುಣವಾಗಿ ಆರ್ & ಆರ್ ಯೋಜನೆಯನ್ನು ಕಾರ್ಯಗತಗೊಳಿಸಬೇಕು. ಹೇಳಲಾದ ಆರ್ & ಆರ್ ಯೋಜನೆಯನ್ನು ರಾಜ್ಯ ಸರ್ಕಾರ/MoEF&CC ಪ್ರಾದೇಶಿಕ ಕಚೇರಿ ಮೇಲ್ವಿಚಾರಣೆ ಮಾಡುತ್ತದೆ.<br>• ಉಪಯೋಗಿ ಸಂಸ್ಥೆಯವರು ಎಲ್ಲಾ ಷರತ್ತುಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಸ್ವಯಂ ಅನುಸರಣೆ ವರದಿಯನ್ನು ಪ್ರತಿ ವರ್ಷ ಮಾರ್ಚ್ ಅಂತ್ಯದೊಳಗೆ ರಾಜ್ಯ ಸರ್ಕಾರ, ಸಂಬಂಧಪಟ್ಟ ಪ್ರಾದೇಶಿಕ ಕಚೇರಿ ಮತ್ತು ಸಚಿವಾಲಯಕ್ಕೆ ನಿಯಮಿತವಾಗಿ ಸಲ್ಲಿಸಬೇಕು.<br>• ಯೋಜನೆಗೆ ಸಂಬಂಧಿಸಿದಂತೆ ಸಂಬಂಧಿಸಿದ ಜಿಲ್ಲಾಧಿಕಾರಿಯಿಂದ ಉದ್ದೇಶಿತ ಸ್ಥಳದಲ್ಲಿ ಯಾವುದೇ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನಾಂಗದವರು ವಾಸವಿಲ್ಲದಿರುವ ಬಗ್ಗೆ / ಉದ್ದೇಶಿತ ಸ್ಥಳದ ಮೇಲೆ ಯಾವುದೇ ಹಕ್ಕುಗಳು ಇಲ್ಲದಿರುವ ಬಗ್ಗೆ ಅರಣ್ಯ ಹಕ್ಕು ಕಾಯ್ದೆ 2006ರಡಿ ನಿಗಧಿತ ನಮೂನೆಯಲ್ಲಿ ಪ್ರಮಾಣ ಪತ್ರಗಳನ್ನು ಪಡೆದು ಸಲ್ಲಿಸುವುದು ಷರತ್ತು (RoFR / FRA Certificate).<br>• ಅರಣ್ಯಗಳು ಮತ್ತು ವನ್ಯಜೀವಿಗಳ ಸಂರಕ್ಷಣೆ, ರಕ್ಷಣೆ ಮತ್ತು ಅಭಿವೃದ್ಧಿಯ ಹಿತದೃಷ್ಟಿಯಿಂದ ಈ ಸಚಿವಾಲಯದ |

| ಕ್ರ.ಸಂ. | ವಿಷಯ | ಉತ್ತರ |
|---|---|---|
| | | ಸಂಬಂಧಿತ ಪ್ರಾದೇಶಿಕ ಕಚೇರಿಯು ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ನಿಗದಿಪಡಿಸಬಹುದಾದ ಯಾವುದೇ ಇತರ ಷರತ್ತುಗಳು ಅನ್ವಯಿಸುತ್ತದೆ.<br>• ಈ ಷರತ್ತುಗಳಲ್ಲಿ ಯಾವುದಾದರೂ ಉಲ್ಲಂಘನೆ ಆದಲ್ಲಿ ವನ್ (ಸಂರಕ್ಷಣ ಏವಂ ಸಂವರ್ಧನ) ಅಧಿನಿಯಮ, 1980 ರ ಉಲ್ಲಂಘನೆಯಾಗುತ್ತದೆ ಮತ್ತು ವನ್ (ಸಂರಕ್ಷಣ ಏವಂ ಸಂವರ್ಧನ) ಅಧಿನಿಯಮ, 1980 ರ ಸಮಗ್ರ ಮಾರ್ಗಸೂಚಿಗಳ ಕೈಪಿಡಿಯ ಪ್ಯಾರಾ 1.21 ರಲ್ಲಿ ಸೂಚಿಸಿದಂತೆ ಕ್ರಮ ಕೈಗೊಳ್ಳಲಾಗುತ್ತದೆ. [ದಿನಾಂಕ 28.03.2019 ರ ಈ ಸಚಿವಾಲಯದ ಪತ್ರ ಸಂಖ್ಯೆ 5-2/2017-FC ಯಿಂದ ಹೊರಡಿಸಲಾಗಿದೆ].<br>• ಕೇಂದ್ರ/ರಾಜ್ಯ ಸರ್ಕಾರ ವಿಧಿಸುವ ಇತರೆ ಷರತ್ತುಗಳು ಅನ್ವಯಿಸುತ್ತದೆ.<br><br>ಇದರಿಂದಾಗಿ ಇಲಾಖೆಗೆ ಯಾವುದೇ ನಷ್ಟ ಉಂಟಾಗುವುದಿಲ್ಲ.<br><br>**ವನ್ಯಜೀವಿ ಘಟಕಕ್ಕೆ ಸಂಬಂಧಿಸಿದಂತೆ:**<br>ವನ್ಯಜೀವಿ ವಿಮೋಚನ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ವನ್ಯಜೀವಿ ಮಂಡಳಿ/ರಾಜ್ಯ ವನ್ಯಜೀವಿ ಮಂಡಳಿಗಳು ವಿಧಿಸುವ ಷರತ್ತುಗಳಿಗೊಳಪಟ್ಟು ಸದರಿ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗುತ್ತಿದೆ.<br><br>ಸಂರಕ್ಷಿತ ಪ್ರದೇಶಗಳಲ್ಲಿ ಸದರಿ ಅಭಿವೃದ್ಧಿ ಕಾರ್ಯಗಳಿಂದ ಅರಣ್ಯದ ಮೇಲೆ ಉಂಟಾಗಬಹುದಾದ ಪರಿಣಾಮಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಸದರಿ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಸೂಕ್ತ ವನ್ಯಜೀವಿ ಸಂರಕ್ಷಣಾ ಯೋಜನೆಗಳನ್ನು ತಯಾರಿಸಿ, ಸದರಿ ಯೋಜನೆಗಳಲ್ಲಿ ಅನುಮೋದನೆಗೊಂಡ ಅರಣ್ಯಕ್ಕೆ ಸಂಬಂಧಿತ ವಿವಿಧ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. |
| ಈ) | ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ಆನೆಗಳ ಹಾವಳಿ ಜಾಸ್ತಿಯಾಗಲು ಕಾರಣವೇನು; ಈ ಪ್ರದೇಶದಲ್ಲಿ ಪ್ರಸ್ತುತ ಇರುವ ಆನೆಗಳ ಸಂಖ್ಯೆ ಎಷ್ಟು: (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನಲ್ಲಿ ಆನೆಗಳ ಹಾವಳಿ ಹೆಚ್ಚಾಗಿರುವುದಕ್ಕೆ ಕಾರಣಗಳು ಈ ಕೆಳಕಂಡಂತಿವೆ.<br><br>1. ದಕ್ಷಿಣ ಕನ್ನಡ ಜಿಲ್ಲೆಯು ಕುದುರೆಮುಖ ವನ್ಯಜೀವಿ ವಿಭಾಗ, ಮೂಡಿಗೆರ, ಸಕಲೇಶಪುರ, ಬಿಸಿಲೆ, ಪುಷ್ಪಗಿರಿ ವನ್ಯಜೀವಿಧಾಮ, ತಲಕಾವೇರಿ ವನ್ಯಜೀವಿಧಾಮ, ಸಂಪಾಜೆ ಹಾಗೂ ಕೇರಳ ರಾಜ್ಯದ ಗಡಿಗೆ ಹೊಂದಿಕೊಂಡು ವನ್ಯಜೀವಿಗಳ ನೈಸರ್ಗಿಕ ಸಂಚಲನ ಪ್ರದೇಶವಾಗಿರುತ್ತದೆ. ಮುಂದುವರಿದು, ಸದರಿ ಪ್ರದೇಶದಲ್ಲಿ 95 ಕಿ.ಮೀ. ಉದ್ದದ ಆನೆ ಸಂಚರಿಸುವ ನೈಸರ್ಗಿಕ ಪಥವಿರುತ್ತದೆ. ಚಾರ್ಮಾಡಿಯಿಂದ ಸುಳ್ಯದವರೆಗೆ ಇರುವ ಈ ಪಥಗಳ ಇಕ್ಕೆಲಗಳಲ್ಲಿ ಜನವಸತಿ ಪ್ರದೇಶ ಹಾಗೂ ಕೃಷಿ ಚಟುವಟಿಕೆಗಳು ಕೂಡ ಒಳಗೊಂಡಿರುತ್ತದೆ.<br><br>2. ಸುಳ್ಯ ತಾಲೂಕಿನ ಪ್ರದೇಶದಲ್ಲಿ ಒಟ್ಟು 48 Enclosure ಗಳಿದ್ದು ಇವೆಲ್ಲವೂ ಕಾಡಿನ ನಡುವೆ ವಾಸಿಸುವ ಜನವಸತಿ ಪ್ರದೇಶಗಳಾಗಿದ್ದು ದಿನನಿತ್ಯ ಮಾನವ-ವನ್ಯಪ್ರಾಣಿ ಸಂಘರ್ಷಕ್ಕೆ ಸಿಲುಕಿದಂತಾಗಿರುತ್ತದೆ.<br><br>3. ದಕ್ಷಿಣ ಕನ್ನಡ ಜಿಲ್ಲೆಯನ್ನು ಸಂಪರ್ಕಿಸುವ ಮುಖ್ಯ ಹೆದ್ದಾರಿಗಳಾದ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 73 (ಚಾರ್ಮಾಡಿ ಘಾಟ್), ರಾಷ್ಟ್ರೀಯ ಹೆದ್ದಾರಿ ಸಂಖ್ಯೆ75 (ಶಿರಾಡಿ ಘಾಟ್), ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 273 (ಮಾಣಿ-ಮಡಿಕೇರಿ) ಇವೆಲ್ಲವೂ ದಟ್ಟ ಅರಣ್ಯ ಪ್ರದೇಶಗಳಲ್ಲಿ ಹಾದು ಹೋಗುತ್ತಿರುವುದಲ್ಲದೇ, ಆನೆಗಳು ಸಂಚರಿಸುವ ನೈಸರ್ಗಿಕ ಪಥ ಕೂಡಾ ಆಗಿರುತ್ತದೆ. ಹಲವಾರು ಬಾರಿ ಆನೆಗಳು ಅಥವಾ ಕಾಡುಕೋಣಗಳು ರಸ್ತೆ ದಾಟುವ ಸಂದರ್ಭದಲ್ಲಿ ವಾಹನಗಳ ಸಂಚಾರವನ್ನು ತಡೆದು ಪ್ರಾಣಿಗಳು ರಸ್ತೆ ದಾಟುವುದಕ್ಕೆ ಅವಕಾಶ ನೀಡಿರುವಂತಹ ಪ್ರಕರಣಗಳು ನಿರಂತರವಾಗಿ ನಡೆಯುತ್ತಿರುತ್ತವೆ ಹಾಗೂ ಕೆಲವು ಪ್ರಕರಣಗಳಲ್ಲಿ ವಾಹನಗಳಿಗೆ |

| ಕ್ರ.ಸಂ. | ವಿಷಯ | ಉತ್ತರ |
|---|---|---|
| | | ಹಾನಿ ಮಾಡಿದಂತಹ ಪ್ರಕರಣಗಳು ದಾಖಲಾಗಿರುತ್ತದೆ.<br><br>4. ಆನೆಗಳು ಸಂಚರಿಸುವ ನೈಸರ್ಗಿಕ ಪಥಗಳಲ್ಲಿ ಕೆಲವು ವರ್ಷಗಳಿಂದ ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಇದರಲ್ಲಿ ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಕಾಮಗಾರಿಯು ನಿರಂತರವಾಗಿ ಹಗಲು-ರಾತ್ರಿ ನಡೆಯುತ್ತಿವೆ. ಇದಲ್ಲದೇ ಈ ಅಭಿವೃದ್ಧಿ ಕಾಮಗಾರಿಗಳಿಗೆ ಅರಣ್ಯ ಭೂಮಿಗಳು ಬಳಕೆಯಾಗುತ್ತಿದ್ದು, ಅರಣ್ಯ ಪ್ರದೇಶಗಳು ಕ್ಷೀಣಿತವಾಗುತ್ತಿದ್ದು, ಆವಾಸ ಸ್ಥಾನದ ವಿಭಜನೆಯಿಂದಾಗಿ ಕಾಡಾನೆಗಳು ಹೊಸ ಪ್ರದೇಶಗಳಿಗೆ ಸಂಚಾರ ಮಾಡುತ್ತಿದ್ದು, ಸ್ಥಳೀಯ ಕೃಷಿ ಭೂಮಿಗಳಿಗೆ ಹಾನಿಯುಂಟಾಗುತ್ತಿದೆ.<br><br>5. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆನೆ ಸೆರೆ ಹಿಡಿಯುವ ಹಾಗೂ ಹಿಮ್ಮೆಟ್ಟಿಸುವ ಕಾರ್ಯಾಚರಣೆ ನಡೆಯುತ್ತಿದ್ದು ಪ್ರಸ್ತುತ ಈ ಪ್ರದೇಶಗಳಲ್ಲಿ ಸುಮಾರು 45 ರಿಂದ 47 ಆನೆಗಳು ಇರುತ್ತದೆ. |
| ಉ) | ಆನೆಗಳು ಮತ್ತು ಇತರ ಪ್ರಾಣಿಗಳು ಅರಣ್ಯದಿಂದ ಹೊರಬರಲು ಕಾರಣಗಳೇನು? (ವಿವರ ನೀಡುವುದು). | ಆನೆಗಳು ಮತ್ತು ಇತರೆ ಪ್ರಾಣಿಗಳು ಅರಣ್ಯದಿಂದ ಈ ಕೆಳಕಂಡ ಕಾರಣಗಳಿಗಾಗಿ ಹೊರಬರುತ್ತವೆ.<br><br>• ಆನೆಗಳು ಸಂಚರಿಸುವ ನೈಸರ್ಗಿಕ ಪಥಗಳಲ್ಲಿ ಕೆಲವು ವರ್ಷಗಳಿಂದ ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಕಾಮಗಾರಿಯು ನಿರಂತರವಾಗಿ ಹಗಲು-ರಾತ್ರಿ ನಡೆಯುತ್ತಿವೆ. ಇದಲ್ಲದೇ ಈ ಅಭಿವೃದ್ಧಿ ಕಾಮಗಾರಿಗಳಿಗೆ ಅರಣ್ಯ ಭೂಮಿಗಳು ಬಳಕೆಯಾಗುತ್ತಿದ್ದು, ಅರಣ್ಯ ಪ್ರದೇಶಗಳು ಕ್ಷೀಣಿತವಾಗುತ್ತಿದ್ದು, ಆವಾಸಸ್ಥಾನದ ವಿಭಜನೆಯಿಂದಾಗಿ ಕಾಡಾನೆಗಳು ಹೊಸ ಪ್ರದೇಶಗಳಿಗೆ ಸಂಚಾರ ಮಾಡುತ್ತಿರುತ್ತವೆ.<br>• ಅರಣ್ಯ ಅಂಚಿನ ಗ್ರಾಮಗಳಲ್ಲಿ ಬಾಳೆ, ಹಲಸು, ಕಬ್ಬು, ಭತ್ತ, ಜೋಳ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದು, ಸದರಿ ಬೆಳೆಗಳಿಗೆ ಆಕರ್ಷಿತವಾಗಿ ಆನೆಗಳು ಹೊರಬರುತ್ತವೆ. |

**ಸಂಖ್ಯೆ: ಅಪಜೀ 198 ಎಫ್ ಡಬ್ಲ್ಯೂ ಎಲ್ 2025**

(ಈಶ್ವರ ಬಿ. ಖಂಡ್ರೆ)
ಮಾನ್ಯ ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ
ಸಚಿವರು

ಅನುಬಂಧ

ಅರಣ್ಯ ವಿಭಾಗವಾರು ಬಿಡುಗಡೆಯಾದ ಅರಣ್ಯ ಪ್ರದೇಶದ ವಿವರ

| # | Name of the Forest Division | Diverted Area (Ha) |
|---|---|---|
| 1 | Bagalkot | 183.2316 |
| 2 | Bangalore Rural | 606.4553 |
| 3 | Bangalore Urban | 52.016 |
| 4 | Bannerghatta National Park | 92.48 |
| 5 | Belgaum | 1061.313 |
| 6 | Bellary | 8437.5579 |
| 7 | Bhadravathi | 527.0813 |
| 8 | Bidar | 27.1441 |
| 9 | Bijapur | 111.9835 |
| 10 | BRT Wildlife | 54.45 |
| 11 | Cauvery Wild life | 2.05 |
| 12 | Chikaballapur | 50.83 |
| 13 | Chikmagalur | 87.9519 |
| 14 | Chitradurga | 1519.6694 |
| 15 | Dandeli Wildlife | 428.32 |
| 16 | Davanagere | 464.1906 |
| 17 | Dharwad | 66.063 |
| 18 | Gadag | 417.2323 |
| 19 | Gokak | 574.0519 |
| 20 | Gulbarga | 10.891 |
| 21 | Haliyal | 449.5485 |
| 22 | Hassan | 243.9995 |
| 23 | Haveri | 18.4313 |
| 24 | Honavar | 1126.6107 |
| 25 | Hunsur | 623.286 |

| # | Name of the Forest Division | Diverted Area (Ha) |
|---|---|---|
| 26 | Karwar | 8562.8453 |
| 27 | Kolar | 111.978 |
| 28 | Kollegal | 160.3755 |
| 29 | Koppa | 179.0866 |
| 30 | Koppal | 14.6583 |
| 31 | Kudremukh Wildlife | 1452.74 |
| 32 | Kundapur | 454.6924 |
| 33 | Madikeri | 73.2695 |
| 34 | Madikeri Wildlife | 0.287 |
| 35 | Mandya | 26.959 |
| 36 | Mangalore | 167.348 |
| 37 | Mysore | 1678.9385 |
| 38 | Raichur | 247.7258 |
| 39 | Ramanagara | 108.565 |
| 40 | Sagar | 161.5148 |
| 41 | Shimoga | 230.2918 |
| 42 | Shimoga Wildlife | 0.7539 |
| 43 | Sirsi | 320.4613 |
| 44 | Tumkur | 355.4923 |
| 45 | Virajpet | 13.806 |
| 46 | Yadagir | 1.8345 |
| 47 | Yellapur | 1335.8001 |
| | **Total** | **32896.2624** |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ (ಅಸಂಕಾ)